# ಕರ್ನಾಟಕ ಸರ್ಕಾರದ ನಡವಳಿಗಳು

(12)

ವಿಷಯ: ಕೃಷಿ ಇಲಾಖೆಯ ಬಿತ್ತನೆ ಬೀಜದ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ಹಾಗೂ ಬಿತ್ತನೆ ಬೀಜಗಳ ದರಗಳನ್ನು ನಿಗದಿಪಡಿಸುವ ಸಲುವಾಗಿ ತಜ್ಞರನ್ನು ನೇಮಿಸುವ ಬಗ್ಗೆ

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಕೃಇ/75/ಕೃಉಇ/2013,ಬೆಂಗಳೂರು, ದಿ: 19/08/2013

2. ಕೃಷಿ ನಿರ್ದೇಶಕರ ಪತ್ರ ಸಂ SFS-4/Seed Tender/ತಾ.ಸ.ತ/2013-14 ದಿ: 02/09/2014

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರಲ್ಲಿನ ಸರ್ಕಾರದ ಆದೇಶದಲ್ಲಿ ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಗಳಡಿ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲ್ಪಡುವ ಬಿತ್ತನೆ ಬೀಜಗಳ ದರಗಳನ್ನು ನಿಗದಿಪಡಿಸುವ ಸಂಬಂಧ ಪ್ರಸ್ತುತ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಗಳಿಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ನೆರವಾಗಲು, ಡಾ: ಪಿ.ಎಂ. ಸಾಲಿಮಠ್, ವಿಶೇಷ ಅಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ರವರ ನೇತೃತ್ವದಲ್ಲಿ ತಾಂತ್ರಿಕ ಸಲಹಾ ಸಮಿತಿಯನ್ನು ನೇಮಿಸಲಾಗಿತ್ತು.

ಪ್ರಸ್ತುತ ಡಾ: ಪಿ.ಎಂ. ಸಾಲಿಮಠ್ ರವರು ವಿಶೇಷ ಅಧಿಕಾರಿಗಳ ಹುದ್ದೆಯಿಂದ ಬಿಡುಗಡೆಯಾಗಿ ಕೃಷಿ ವಿಶ್ವವಿದ್ಯಾನಿಲಯ, ಧಾರವಾಡದ ಅಣುವಂಶಿಕ ಮತ್ತು ತಳಿ ಅಭಿವೃದ್ಧಿ ವಿಭಾಗದ (Professor and Head, Genetics and Plant Breeding) ಮುಖ್ಯಸ್ಥರಾಗಿ ಕಾರ್ಯಭಾರ ವಹಿಸಿಕೊಂಡಿರುತ್ತಾರೆ.

ಪ್ರಸ್ತುತ 2014-15ರ ಹಿಂಗಾರು/ಬೇಸಿಗೆ ಹಂಗಾಮಿಗೆ ಇಲಾಖಾ ಕಾರ್ಯಕ್ರಮಗಳಡಿ ಬೀಜ ಪೂರೈಕೆಗಾಗಿ ಈಗಾಗಲೇ ಅಲ್ಪಾವಧಿ ಇ-ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಬಿತ್ತನೆ ಬೀಜಗಳ ದರ ಕರಾರನ್ನು ಜಿಲ್ಲೆಗಳಿಗೆ ಕಳುಹಿಸಬೇಕಾಗಿರುತ್ತದೆ. ಆದ್ದರಿಂದ 2014-15ರ ಹಿಂಗಾರು ಬೇಸಿಗೆ ಹಂಗಾಮಿನಿಂದ ಅನ್ವಯವಾಗುವಂತೆ, ಇಲಾಖೆಯ ಬಿತ್ತನೆ ಬೀಜದ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ಹಾಗೂ ಬಿತ್ತನೆ ಬೀಜಗಳ ದರಗಳನ್ನು ನಿಗದಿಪಡಿಸುವ ಸಲುವಾಗಿ ತಾಂತ್ರಿಕ ಸಮಿತಿಯನ್ನು ರಚಿಸಲು ಕೃಷಿ ನಿರ್ದೇಶಕರು ಮೇಲೆ ಓದಲಾದ (2) ರಲ್ಲಿನ ಪತ್ರದಲ್ಲಿ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಸರ್ಕಾರವು ಇಲಾಖೆಯ ಬಿತ್ತನೆ ಬೀಜದ ಟೆಂಡರ್ ಆಹ್ವಾನ ಮತ್ತು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ಹಾಗೂ ಬಿತ್ತನೆ ಬೀಜಗಳ ದರಗಳನ್ನು ನಿಗದಿಪಡಿಸುವ ಸಲುವಾಗಿ ಓರ್ವತಜ್ಞ ತಾಂತ್ರಿಕ ಸಮಿತಿ ರಚಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/142/ಎಎಂಎಸ್/2014, ಬೆಂಗಳೂರು, ದಿ: 31/10/2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕೃಷಿ ಇಲಾಖೆಯಲ್ಲಿ ವಿವಿಧ ಯೋಜನೆಯಡಿ ರೈತರಿಗೆ ಪೂರೈಕೆ ಮಾಡುತ್ತಿರುವ ಬಿತ್ತನೆ ಬೀಜ ದರ ಕರಾರು ನಿಗಧಿಪಡಿಸುವ ಸಂಬಂಧ ಪ್ರಸ್ತುತ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಟೆಂಡರ್ ಆಹ್ವಾನ ಹಾಗೂ ಟೆಂಡರ್ ಅಂಗೀಕಾರ ಪ್ರಾಧಿಕಾರಗಳಿಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡಲು ನೆರವಾಗುವಂತೆ ಅಂದಿನ ಡಾ: ಪಿ.ಎಂ. ಸಾಲಿಮಠ್, ವಿಶೇಷ ಅಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ರವರ ಬದಲಿಗೆ ಡಾ.ಬಿ.ಎಂ.ಖಾದಿ,ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಏಕ ತಜ್ಞ ತಾಂತ್ರಿಕ ಸಲಹಾ ಸಮಿತಿಯನ್ನು ನೇಮಿಸಿ ಆದೇಶಿಸಿದೆ:

ಈ ಮೇಲೆ ತಿಳಿಸಿದ ತಾಂತ್ರಿಕ ಸಲಹಾ ಸಮಿತಿಯು ಈ ಕೆಳಕಂಡ ಅಂಶಗಳನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಪರಾಮರ್ಶಿಸಿ ಶಿಫಾರಸ್ಸು ನೀಡುವಂತೆ ಆದೇಶಿಸಿದೆ ಹಾಗೂ ಸಮಿತಿ ನೀಡುವ ಶಿಫಾರಸ್ಸುಗಳನ್ನು ಕೃಷಿ ಇಲಾಖೆ ಕಡ್ಡಾಯವಾಗಿ ಪಾಲಿಸತಕ್ಕದ್ದು:

- ಟೆಂಡರ್ ಪರಿಶೀಲನಾ ಸಮಿತಿಯು ತಾಂತ್ರಿಕ ಹಾಗೂ ವಾಣಿಜ್ಯ ಬಿಡ್ಡುಗಳನ್ನು ತೆರೆದು ಸಲ್ಲಿಸುವ ವರದಿಗಳನ್ನು ಪರಿಶೀಲಿಸಿ ಅದರ ಮೇಲೆ ಅಭಿಪ್ರಾಯ ನೀಡುವುದು ಹಾಗೂ ಗುಣಮಟ್ಟ ಮತ್ತು ದರ ಕರಾರು ಪರಾಮರ್ಶಿಸಿ. ಅಂಗೀಕಾರ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು.
- ಸಂಸ್ಥೆಗಳು ಕೋಟ್ ಮಾಡಿರುವ ದರಗಳನ್ನು ಮುಕ್ತ ಮಾರುಕಟ್ಟೆ ದರಗಳ ಜೊತೆ ಕೂಲಂಕಷವಾಗಿ ಪರಿಶೀಲಿಸಿ. ರೈತರು ನೀಡಬೇಕಾದ ವಂತಿಗೆಯನ್ನು ಗಮನದಲ್ಲಿಟ್ಟುಕೊಂಡು ಬಿತ್ತನೆ ಬೀಜಗಳನ್ನು ಸ್ಪರ್ಧಾತ್ಮಕವಾಗಿ. ವೈಜ್ಞಾನಿಕವಾಗಿ ನಿರ್ಧರಿಸಿ ಅಂಗೀಕಾರ ಪ್ರಾಧಿಕಾರಕ್ಕೆ ಸೂಕ್ತ ಶಿಫಾರಸ್ಸು ನೀಡುವುದು.
- ಬಿತ್ತನೆ ಬೀಜ ವಿತರಣೆಗೆ ನೀಡಬಹುದಾದ ರಿಯಾಯಿತಿ ದರದ ಬಗ್ಗೆ ಶಿಫಾರಸ್ಸು ನೀಡುವುದು.
- ಸರ್ಕಾರವು ಈ ಬಗ್ಗೆ ಆಗಿಂದ್ದಾಗ್ಗೆ ಸೂಚಿಸುವ ಅಂಶಗಳಿಗೆ ವರದಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಆಯುಕ್ತರು/ನಿರ್ದೇಶಕರು. ಕೃಷಿ ಇಲಾಖೆ. ಬೆಂಗಳೂರು.
2. ಕುಲಪತಿಗಳು. ಕೃಷಿ ವಿಶ್ವವಿದ್ಯಾಲಯ. ಬೆಂಗಳೂರು.
3. ಕುಲಪತಿಗಳು. ಕೃಷಿ ವಿಶ್ವವಿದ್ಯಾಲಯ. ಧಾರವಾಡ.
4. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ. ಬೀಜ ಭವನ. ಹೆಬ್ಬಾಳ. ಬೆಂಗಳೂರು-560 024.
5. ಡಾ.ಬಿ.ಎಂ.ಖಾದಿ. ಸಂಶೋಧನಾ ನಿರ್ದೇಶಕರು. ಕೃಷಿ ವಿಶ್ವವಿದ್ಯಾಲಯ. ಧಾರವಾಡ
6. ಡಾ: ಪಿ.ಎಂ. ಸಾಲಿಮಠ್. ಮುಖ್ಯಸ್ಥರು ಅನುವಂಶಿಕ ಮತ್ತು ತಳಿ ಅಭಿವೃದ್ಧಿ ವಿಭಾಗ (Professor and Head, Genetics and Plant Breeding) ಕೃಷಿ ವಿಶ್ವವಿದ್ಯಾನಿಲಯ. ಧಾರವಾಡ
7. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಬೀಜ ಪ್ರಮಾಣನ ಸಂಸ್ಥೆ ಹೆಬ್ಬಾಳ. ಬೆಂಗಳೂರು-560 024.
8. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ. ವಿಕಾಸಸೌಧ. ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ. ಕೃಷಿ ಇಲಾಖೆ.
10. ಶಾಖೆಯ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.